OS 143/2021

- - PW-1

ದಿನಾಂಕಃ 14-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ವೈ ಎಂ ಆರ್ ವಕೀಲರಿಂದಃ**

ನಾನು ನನ್ನ ಚಿಕ್ಕಪ್ಪನಾದ ಪ್ಯಾರೇ ಸಾಬ್ ರವರಿಂದ 1 ಎಕರೆ 7 ಗುಂಟೆ ಜಮೀನನ್ನು ಸರ್ವೆ ನಂ 11 ರಲ್ಲಿನ ಸೂಳೆಕೆರೆಯಲ್ಲಿನ ಜಮೀನನ್ನು ನಾನು ಖರೀದಿ ಮಾಡಿರುತ್ತೇನೆ. ಸದರಿ ಖರೀದಿ ಕಾಲಕ್ಕೆ 1 ರಿಂದ 3 ನೇ ಪ್ರತಿವಾದಿಗಳು ನಮ್ಮ ಕುಟುಂಬದಲ್ಲಿ ವಾಸವಾಗಿದ್ದರು ಎಂದರೆ ಸರಿಯಲ್ಲ. ಹಾಗಾಗಿ ದಾವಾಸ್ತಿಯನ್ನು ಪ್ರತಿವಾದಿಗಳು ಖರೀದಿ ಮಾಡಿದ ಆಸ್ತಿಯಾಗಿದ್ದು ನಾನು ಕ್ರಯಕ್ಕೆ ಪಡೆದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಗಳ ತಂದೆ ಕ್ಯಾನ್ಸರ್ ಕಾಯಿಲೆಯಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ, ಸದರಿ ಕಾಯಿಲೆಗಾಗಿ ಚಿಕಿತ್ಸೆಯನ್ನು ಪಡೆಯುತ್ತಿದ್ದರು ಎಂದರೆ ಸರಿಯಲ್ಲ. ಹಾಗಾಗಿ ಪ್ರತಿವಾದಿಯ ತಂದೆ ಸದರಿ ಕಾಯಿಲೆಯಿದಲೇ ಮೃತಪಟ್ಟಿರುತ್ತಾರೆ ಎಂದರೆ ಸರಿಯಲ್ಲ. ಹಾಗಾಗಿ ನನಗೆ ದಾವಾಸ್ತಿಯಲ್ಲಿ ಯಾವುದೇ ಹಿಸ್ಸಾ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಹಾಗಾಗಿ ಪ್ರತಿವಾದಿಗಳ ತಂದೆಯೇ ದಾವಾಸ್ತಿಯನ್ನು ಖರೀದಿಸಿದ್ದು, ಅವರ ವಾರಸುದಾರರೇ ಪ್ರಸ್ತುತ ದಾವಾಸ್ತಿಯಲ್ಲಿ ಅನುಭವದಲ್ಲಿದ್ದಾರೆ ಎಂದರೆ ಸರಿಯಲ್ಲ. ಈಗಲೂ ಸಹ ನನಗೆ ದಾವಾಸ್ತಿಯಲ್ಲಿ ಯಾವುದೇ ಹಕ್ಕು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ದಾವಾಸ್ತಿಯ ಖಾತಾ ಮತ್ತು ಪಹಣಿ ಪ್ರತಿವಾದಿಗಳ ಹೆಸರಿನಲ್ಲಿ ಮುಂದುವರೆಯುತ್ತಿದೆ ಎಂದರೆ ಸರಿಯಲ್ಲ. ಹಾಗಾಗಿ ದಾವಾ ಬಿ ಷೆಡ್ಯೂಲ್ ಆಸ್ತಿಯನ್ನು ಪ್ರತಿವಾದಿಗಳ ತಂದೆ ಪ್ರತಿವಾದಿಗಳಿಗೆ ನೊಂದಾಯಿತ ದಾನಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಸದರಿ ದಾನಪತ್ರವನ್ನು ಮಾಡಿಕೊಟ್ಟ ಬಗ್ಗೆ ನನಗೆ 2 ವರ್ಷಗಳ ಹಿಂದೆ ಗೊತ್ತಾಗಿದ್ದು ಆಗಲೇ ನಾನು ಸದರಿ ದಾಖಲೆಯನ್ನು ನೋಡಿರುತ್ತೇನೆ. ಸದರಿ ವಿಚಾರ ತಿಳಿದ ನಂತರ ನಾನು ಮಸೀದಿಗೆ ಹೋಗಿರುತ್ತೇನೆ. ಸದರಿ ದಾವಾಸ್ತಿಯ ಕುರಿತ ವಿಚಾರವಾಗಿ ಮಸೀದಿಯ ಹಿರಿಯರ ಸಮಕ್ಷಮ ವಿಚಾರಿಸಿದ್ದು, ಸದರಿಯವರು ನನಗೆ ನ್ಯಾಯಾಲಯಕ್ಕೆ ಹೋಗುವಂತೆ ಸೂಚಿಸಿರುತ್ತಾರೆ, ಹಾಗಾಗಿ ನಾನು ಈ ದಾವೆಯನ್ನು ಹೂಡಿರುತ್ತೇನೆ. ಹಾಗಾಗಿ ನನಗೆ ದಾವಾಸ್ತಿಯ ಕುರಿತು ಯಾವುದೇ ವೈಯಕ್ತಿಕ ಮಾಹಿತಿ ಇಲ್ಲದೆ ಇದ್ದರು ಸಹ ಮಸೀದಿಯವರ ಇರಾದೆಯ ಮೇರೆಗೆ ಈ ದಾವೆ ಹೂಡಿದ್ದೆನೆ ಎಂದರೆ ಸರಿಯಲ್ಲ, ಸಾಕ್ಷಿ ನನಗೆ ಗೊತ್ತಾಗಿ ಈ ದಾವೆ ಹೂಡಿದ್ದೆನೆ ಎಂದು ನುಡಿಯುತ್ತಾರೆ.

ದಿಃ06-02-2023ರಂದು 3ನೇ ಪ್ರತಿವಾದಿ ದಾವಾಸ್ತಿಯನ್ನು ಮಾರಾಟ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಮಾರಾಟದ ತರುವಾಯ ಖರೀದಿದಾರರ ಹೆಸರಿಗೆ ಕಂದಾಯ ದಾಖಲೆಗಳು ವರ್ಗಾವಣೆಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಈ ದಾವೆ ಹೂಡುವ ಸಮಯಕ್ಕೆ ದಾವಾಸ್ತಿಗೆ ಸಂಬಂಧಿಸಿದ ದಾಖಲೆಗಳನ್ನು ನಾನು ಪರಿಶೀಲಿಸಿರುತ್ತೇನೆ. ನನಗೆ ವಯಸ್ಸಾದ ಕಾರಣ ನಾನು ಮನೆ ಬಿಟ್ಟು ಹೊರಗೆ ಹೋಗಿಲ್ಲ ಎಂದರೆ ಸರಿ. ಹಾಗಾಗಿ ದಾವಾಸ್ತಿಯ ವಿಚಾರದ ಬಗ್ಗೆ ಮತ್ತು ಕ್ರಯ ವ್ಯವಹಾರದ ಬಗ್ಗೆ ನನಗೆ ಯಾವುದೇ ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ನನಗೆ ಗೊತ್ತಿಲ್ಲ. ನಾನು ಪ್ರಸ್ತುತ ನನ್ನ ಹೆಣ್ಣುಮಕ್ಕಳೊಂದಿಗೆ ವಾಸವಿದ್ದೇನೆ. ಸದರಿಯವರೇ ನನ್ನ ಆರೈಕೆ ಮತ್ತು ಯೋಗಕ್ಷೇಮವನ್ನು ಪ್ರಸ್ತುತ ಮಾಡುತ್ತಿದ್ದಾರೆ. ಹಾಗಾಗಿ ನಾನು ನನ್ನ ಹೆಣ್ಣು ಮಕ್ಕಳ ಇರಾದೆ ಮೇರೆಗೆ ಈ ದಾವೆ ಹೂಡಿದ್ದೇನೆ ಎಂದರೆ ಸರಿಯಲ್ಲ.

3ನೇ ಪ್ರತಿವಾದಿ ಮತ್ತು 2ನೇ ವಾದಿಗೆ ವಿವಾಹವಾಗುವ ಕಾಲಕ್ಕೆ ಮದುವೆಯ ಖರ್ಚು ಎಷ್ಟು ಬಂದಿತ್ತು ಎಂದರೆ ಸಾಕ್ಷಿ ನಾನೇ ಖರ್ಚನ್ನು ಹಾಕಿ ಮದುವೆ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನನಗೆ ವಯಸ್ಸಾದ ಕಾರಣ ಸುಮಾರು 20 ವರ್ಷಗಳಿಂದ ಯಾವುದೇ ಆದಾಯದ ಮೂಲ ಇಲ್ಲ ಎಂದರೆ ಸರಿ. ಹಾಗಾಗಿ ನನ್ನ ಹೆಣ್ಣುಮಕ್ಕಳ ಮದುವೆಯ ಖರ್ಚನ್ನು 1ನೇ ಪ್ರತಿವಾದಿಯೇ ಪ್ರತಿಯೊಬ್ಬರಿಗೂ 75 ಸಾವಿರ ರೂ. ಗಳಂತೆ ಮದುವೆ ಮಾಡಿರುತ್ತಾನೆ ಎಂದರೆ ಸರಿಯಲ್ಲ. ಸದರಿ ದಾವಾಸ್ತಿಯನ್ನು ಎಸ್ ಬಿ ಐ , ಕೆರೆಬಿಳಚಿ ಬ್ಯಾಂಕಿಗೆ ಆಧಾರವಾಗಿಟ್ಟು 1 ನೇ ಪ್ರತಿವಾದಿ ಸಾಲವನ್ನು ಪಡೆದಿರುತ್ತಾರೆ ಎಂದರೆ ನನಗೆಗೊತ್ತಿಲ್ಲ.

(ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಸಮಯಾವಕಾಶ ನೀಡಲಾಯಿತು).

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)** **ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.